


ಪರಿಭಾವಿಸುವಲ್ಲಿ ಹೇಗೆ ನಮ್ಮ ಪುರೋಗಾಮಿ ಮನಸ್ಸು ಅಜ್ಜ ಹಾಕಿದ ಆಲದ ಮರಕ್ಕೆ ಕಟ್ಟಿಹಾಕಿಕೊಂಡಿರುತ್ತವೆ ಎಂದು ಖೇದವಾಗುತ್ತದೆ. ಕುವೆಂಪು ಈ ಕಾಲದಲ್ಲಿ ಬದುಕಿದ್ದಿದ್ದರೆ ಈ ಯುಗಸಂಘರ್ಷವನ್ನೂ ಒಳಗೊಂಡ ಒಂದು ಹೊಸ ಭಾವವನ್ನೂ, ಕನ್ನಡದ ಸಾಲಲ್ಲಿ ಹಿಡಿದಿಟ್ಟುಬಿಡುತ್ತಿದ್ದರೇನೋ ಎನಿಸಿ ಪುಳಕವಾಗುತ್ತದೆ.

ಮತ್ತೆ ಹೆಸರಿನ ಲೋಕಕ್ಕೆ ಬರುವುದಾದರೆ ನಾನು ಚಿಕ್ಕವನಿದ್ದಾಗ ನಮ್ಮ ಓಣಿಯಲ್ಲಿದ್ದ ಛಲವಾದಿ ಸಮುದಾಯದ ಒಂದು ಮನೆಯಲ್ಲಿ ಹೆಣ್ಣುಮಗು ಹುಟ್ಟಿತು. ಆ ಮಗುವಿನ ತಾಯಿ ಆಕೆಯ ಮಗಳ ಹೆಸರು ಅಲ್ಲಿಯವರೆಗೂ ಇದ್ದ ಕೊಟ್ರವ್ವ, ಕಾಳವ್ವ, ಯಮುನವ್ವ, ಕರಿಯವ್ವ ಎಲ್ಲ ಬೇಡ. ಚೂರು ಆಧುನಿಕ ಹೆಸರಿಡೋಣ ಎಂದು ಅಖಿಲಾ ಎಂದು ಹೆಸರಿಟ್ಟರು. ಆ ಹೆಸರು, ಆ ಹೆಣ್ಣುಮಗಳು ತಾನು ಮುಸುರೆ ಕೆಲಸಕ್ಕೆ ಹೋಗುತ್ತಿದ್ದಾಗ ಆ ಮನೆಯ ಟೀವಿಯಲ್ಲಿ ಬರುತ್ತಿದ್ದ ಧಾರಾವಾಹಿಯ ನಾಯಕಿಯ ಪಾತ್ರದ ಹೆಸರಾಗಿತ್ತು ಅಖಿಲಾ! ನಾಮಕಾರಣ ಸಮಾರಂಭವು ಇದ್ದದ್ದರಲ್ಲಿಯೇ ತುಂಬಾ ಚೆನ್ನಾಗಿ ಆಯಿತು. ನನ್ನಮ್ಮನು ಆ ಕೂಸಿಗೆ ಒಂದು ಗುಲಾಬಿ ಬಣ್ಣದ ಫ್ರಾಕನ್ನು ಮುಯ್ಯಿ ಮಾಡಿ ಬಂದಿತು. ಅದಾದ ಎರಡು ದಿನ ಬಿಟ್ಟು ಆ ತಾಯಿ ಕಿರಾಣಿ ತರುವುದಕ್ಕೆ ಉನ್ನತ ಜಾತಿಯ ಜನ ನಡೆಸುವ ಅಂಗಡಿಗೆ ಹೋದಾಗ 'ಕೂಸಿಗೆ ಹೆಸರೇನಿಟ್ಟೆ ಕಾಳವ್ವ?' ಎಂದು ವಿಚಾರಿಸಲಾಗಿ, ಮಗಳ ಹೆಸರು ಅಖಿಲಾ ಎಂದು ತಿಳಿಯಲಾಗಿ, ಆ ಕಿರಾಣಿ ಅಂಗಡಿ ಹೆಂಗಸು 'ಭಾಳ ಜೋರಾಗಿ ಬಿಟ್ಟಬಿಡವ್ವಾ. ಭಾಳ ಫ್ಯಾಷನ್ ಮಾಡ್ತೀರಿ ಬಿಡ್ರಿ' ಎಂದು ವ್ಯಂಗ್ಯ ಮಾಡಿದರಂತೆ. ಹೆಸರಿನ ಆಧುನಿಕತೆಯನ್ನೂ ಸಹಿಸದಷ್ಟು ಜಾತಿ ಮೇಲುಗೈ ಭಾವ ನಮ್ಮಲ್ಲಿದೆ ಎಂದರೆ ಇದೆಲ್ಲಾ ಭಾರತದಲ್ಲಿ ನಿತ್ಯ ನೇಯುವ ಗೇಯುವ ನೋವು ಎಂದು ನಿಮಗೂ ಗೊತ್ತಿದೆಯಲ್ಲವೇ?!

ಇನ್ನೊಂದು ಪ್ರಸಂಗದಲ್ಲಿ ಒಂದು ಕಾಲದಲ್ಲಿ ಆತ್ಮೀಯ ಗೆಳತಿಯರಾಗಿದ್ದ ಎರಡು ಜೀವಗಳು ಒಂದು ಸಾಹಿತ್ಯ ಕಾರ್ಯಕ್ರಮದಲ್ಲಿ ಭೇಟಿಯಾದರು. ಅವರಲ್ಲಿ ಒಬ್ಬರು ಹೆಣ್ಣಿಂದ ಗಂಡಾಗಿದ್ದರು. ಇಬ್ಬರಿಗೂ ಒಬ್ಬರ ಮೇಲೊಬ್ಬರು ಹೊಟ್ಟೆ ಕಿಚ್ಚು, ಒಳಗೇ ಭುಸುಗುಡುವ ಹೇಳತೀರದ ಧಗೆ. ಒಬ್ಬರು ಮತ್ತೊಬ್ಬರನ್ನು ನೋಯಿಸುವ ಹಲವು ಹತ್ಯಾರಗಳನ್ನು ಪ್ರಯೋಗಿಸುತ್ತಾ ಹೋದರು. ಒಂದೊಂದೇ ಹತ್ಯಾರಗಳು ಖಾಲಿಯಾಗುತ್ತಾ ಹೋದವು. ಕಡೆಗೆ ಹೆಣ್ಣು ಜೀವ, ಹೆಣ್ಣಿಂದ ಗಂಡಾದ ಮತ್ತೊಂದು ಜೀವವನ್ನು ಮಣಿಸುವ ಕೊನೆಯ ಆಯುಧವಾಗಿ ಅವರ ಸರ್ಜರಿಗಿಂತ ಮುಂಚಿನ ಡೆಡ್ ನೇಮ್ ಎಂಬ ಹಳೆಯ ಹೆಸರನ್ನು ಹೇಳಿ ಕರೆದುಬಿಟ್ಟರಂತೆ!

ಹೀಗೆ ರೂಪ, ರೂಪಾಂತರಗಳು, ನಾಮ, ಸರ್ವನಾಮಗಳು ತಮ್ಮೊಳಗೆ ಹಾಗೂ ನಾಗರಿಕರ ತಲೆಯೊಳಗೆ ತೆಗೆದುಕೊಳ್ಳುವ ಆಯಾಮಗಳನ್ನೆಲ್ಲಾ ನೋಡಿದಾಗ ನೂರು ಮತದ ಹೊಟ್ಟ ತೂರಿ, ಎಲ್ಲ ತತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ ಎಲ್ಲಿಯೂ ನಿಲ್ಲದೆ, ಮನೆಯನೆಂದು ಕಟ್ಟದೆ, ಕೊನೆಯನೆಂದು ಮುಟ್ಟದೆ, ಚೇತನಗಳಾದ ನಾವು ಅನಿಕೇತನಗಳಾಗುವುದು ಹೊಸ ಅರ್ಥವಿನ್ಯಾಸಗಳನ್ನೇ ಪಡೆದುಕೊಳ್ಳುತ್ತವೆ ಎನಿಸುತ್ತದೆ. ಕುವೆಂಪು ಭಾವಗೀತೆಯ ಕೊನೆಗೆ 'ಅನಂತ ತಾನ್ ಅನಂತವಾಗಿ, ಆಗುತಿಹನೆ ನಿತ್ಯ ಯೋಗಿ, ಅನಂತ ನೀ ಅನಂತವಾಗು ಆಗು ಆಗು ಆಗು' ಎಂದು 'ಆಗು' ಪದವನ್ನು ಮೂರು ಬಾರಿ ಬಳಸುತ್ತಾರೆ. ನನಗೆಲ್ಲೋ ಅನಂತತನ ಎಂಬುದು ಅಥವಾ ನಾಮ ರೂಪಗಳನ್ನು ಮೀರುವುದು ಎಂಬುದು ಇರುವುದು ಮತ್ತು ಆಗುವುದರ ನಡುವಿನ ಪ್ರಯಾಣದೊಳಗೆ ಇದೆ ಎನಿಸುತ್ತದೆ. ನಿತ್ಯ ನಾವು ಆಚರಣೆಯಂತೆ ಇವೆರಡರ ನಡುವೆ ತುಯ್ಯುವುದರ ಅಗ್ನಿದಿವ್ಯದ ನಡುವೆಯಿದೆ ಎನಿಸುತ್ತದೆ. ಇಷ್ಟಾಗುವಾಗಲೇ ಇಷ್ಟು ಬರೆಯುವಾಗಲೇ ನಾನು ಎಂಬ ನಾನು ಎದುರುಗೊಂಡ ಎಲ್ಲರ ಹೆಸರನ್ನು ಇಲ್ಲಿಯವರೆಗೂ ಸರಿಯಾಗಿ ಉಚ್ಚಾರಣೆ ಮಾಡಿದ್ದೇನೆಯೇ? ಬೇರೆ ರಾಜ್ಯಗಳಿಂದ ವಲಸೆ ಬಂದ, ಪಶ್ಚಿಮದಿಂದ ವಲಸೆ ಬಂದ ಹಕ್ಕಿಗಳ ಹೆಸರು, ಅದರ ಉಯಿಲಿಗೆ ಸರಿಯಾಗಿ ದನಿಯಾಗಿದ್ದೇನೆಯೇ ಎಂದು ದಿಗಿಲಾಗುತ್ತದೆ. ●